ಎರಡೂ ಸರಿಸಮನಾಗಿ ಕಾರಣವಾಗಿರುವುದಂತೂ ನಿಜ' ಎನ್ನುತ್ತಾ ಹೆಗಡೆ ಟೇಬಲ್ ಬಳಿ ಕುಳಿತ. ಬಾಳಿಗ ಎರಡು ಗ್ಲಾಸುಗಳಿಗೆ ವಿಸ್ಕಿ, ಸೋಡ, ನೀರನ್ನು ಹದವಾಗಿ ಬೆರೆಸಿ ಟೇಬಲ್ ಮೇಲೆ ಇರಿಸಿದ್ದ. ಇಬ್ಬರೂ ಚಿಯರ್ಸ್ ಹೇಳಿ ನಮ್ಮ ನಮ್ಮ ಗ್ಲಾಸುಗಳನ್ನು ಬಾಯಿಗಿಟ್ಟುಕೊಂಡಿದ್ದೆವು. 'ವ್ಯವಸ್ಥೆಯೊಂದಿಗೆ ಯಾರು ಹೊಂದಿಕೊಂಡು ಹೋಗುತ್ತಾರೋ ಅವರು ಆರಾಮವಾಗಿ ನೆಮ್ಮದಿಯಿಂದ ಇರುತ್ತಾರೆ. ಐ ಮೀನ್ ಅವರು ಪ್ರಜ್ಞೆಯನ್ನು ಯಾವದೋ ಮೂಲೆಯಲ್ಲಿ ಕೆಲಸಕ್ಕೆ ಬಾರದಂತೆ ಬಿಸಾಕಿರಬೇಕು ಅಷ್ಟೆ. ಅಂಥವರೇ ಇಂದು ನಮ್ಮ ದೇಶದಲ್ಲಿ ತುಂಬಿ ತುಳುಕುತ್ತಿದ್ದಾರೆ. ಖಂಡಿತವಾಗಿ ನಮ್ಮದೊಂದು ವಿಚಿತ್ರವಾದ ಪ್ರಜಾಪ್ರಭುತ್ವ ವ್ಯವಸ್ಥೆ ಅನ್ನಿಸ್ತದೆ. ಹಾಗೆ ನೋಡಿದರೆ ಜಗತ್ತಿನಲ್ಲಿ ಯಾವ ರಾಜಕೀಯ ವ್ಯವಸ್ಥೆಯೂ ತನ್ನನ್ನು ನಂಬಿಕೊಂಡ ಜನಸಾಮಾನ್ಯರಿಗೆ ಹಂಡ್ರೆಡ್ ಪರ್ಸೆಂಟ್ ನ್ಯಾಯವನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ ಎಂಬುದು ಈಗಾಗಲೇ ಸಾಬೀತಾಗಿದೆ. ಚೈನಾ, ರಷ್ಯಾಗಳ ಇವೊತ್ತಿನ ಸ್ಥಿತಿಗತಿಗಳನ್ನು ನೋಡಿದರೆ ಕಮ್ಯುನಿಸಂ ಬಗ್ಗೆ ವಾಕರಿಕೆ ಬರುತ್ತದೆ. ಅಸಲು ದೋಷಗಳಿರುವುದು ಸಿದ್ಧಾಂತಗಳಲ್ಲಿ ಅಲ್ಲ, ಅವುಗಳನ್ನು ಸೃಷ್ಟಿಸಿದವರಲ್ಲೂ ಅಲ್ಲ. ಅವುಗಳನ್ನು ಫಾಲೋ ಮಾಡುವ ವ್ಯಕ್ತಿಗಳಲ್ಲಿ. ಮೊದಲಿಗೆ ಆ ಗೊರ್ಬಚವ್ ರಷ್ಯಾವನ್ನು ಹಾಳು ಮಾಡುವುದರೊಂದಿಗೆ ಕಮ್ಯುನಿಸ್ಟ್ ಸಿದ್ಧಾಂತಗಳನ್ನೂ ಪುಡಿ ಪುಡಿ ಮಾಡಿದ. ಚೈನಾದ ಈಗಿನ ಪ್ರೆಸಿಡೆಂಟ್ ಪುಟಿನ್, ಮಾರ್ಕ್ಸ್ ನ ಸಮಾನತೆಯ ಸಿದ್ಧಾಂತಗಳಿಗೇ ಬೆಂಕಿ ಹಚ್ಚಿ ಹುಚ್ಚನಂತೆ ನರಬಲಿಯಲ್ಲಿ ಮುಳುಗಿದ್ದಾನೆ' ಭೂತ ಮತ್ತು ವರ್ತಮಾನಗಳನ್ನು ಒಂದು ವೃತ್ತದಲ್ಲಿ ಬ್ಲೆಂಡ್ ಮಾಡುತ್ತಾ ಮಾತನಾಡುತ್ತಲೇ ಹೆಗಡೆ ವಿಸ್ಕಿಯ ಗ್ಲಾಸನ್ನು ಮೂರ್ನಾಲ್ಕು ಬಾರಿ ಬಾಯಿಗಿಟ್ಟುಕೊಂಡು ಹೀರಿದ್ದ. ಭಾವುಕತೆ ತುಂಬಿದ್ದರೂ ಅದನ್ನು ತೋರಗೊಡದ ನಿರ್ಲಿಪ್ತ ಗುಣವನ್ನು ಹೆಗಡೆ ಹೇಗೆ ರೂಢಿಸಿಕೊಂಡಿದ್ದಾನೆಂಬ ಬಗ್ಗೆ ಒಂದು ಕ್ಷಣ ವಿಸ್ಮಯ ಮೂಡಿತ್ತು. ಅನೇಕ ವರ್ಷಗಳ ಹಿಂದೆ ಹೆಗಡೆ ಪೊಲೀಸ್ ಸ್ಟೇಷನ್ ಸೆಲ್ಲಿನಲ್ಲಿ ಕೂತು ಮಾತನಾಡುತ್ತಿರುವಂತೆ ಭಾಸವಾಗಿತ್ತು ನನಗೆ. 'ಇವೊತ್ತು ಜಗತ್ತನ್ನು ಕಾಡುತ್ತಿರುವ ಬಹು ದೊಡ್ಡ ವ್ಯಾಧಿಯೆಂದರೆ ಪ್ರತಿಯೊಬ್ಬ ಮನುಷ್ಯನಿಗೂ ತನಗೇನು ಬೇಕು ಅಥವಾ ಬೇಡ ಎಂಬುದರ ಬಗ್ಗೆ ಸ್ಪಷ್ಟವಾದ ನಿಲುವು ಇಲ್ಲದೆ ಇರುವುದು. ಇದಕ್ಕೆ ಪ್ರಮುಖ ಕಾರಣ ಜಗತ್ತಿನಾದ್ಯಂತ ಕೆಲಸಕ್ಕೆ ಬಾರದ ಸಾವಿರಾರು ಸರಕುಗಳ ಉತ್ಪಾದನೆ. ಇದು ಅನೇಕ ಕಾರಣಗಳಿಂದ ಮನುಷ್ಯನ frustrationಗೆ ಕಾರಣವಾಗಿದೆ. ಗಾಂಧಿ ಮತ್ತು ಮಾರ್ಕ್ಸ್ ಇಂದು ಫೇಲ್ ಆಗಿರುವುದಕ್ಕೆ ಕಾರಣಗಳನ್ನು ಹುಡುಕುತ್ತಾ ಹೋದರೆ ಗ್ಲೋಬಲೈಸೇಷನ್ ಮತ್ತು ಆರ್ಥಿಕ ಉದಾರಿಕರಣ ನಮ್ಮ ಮುಂದೆ ನಿಲ್ಲುತ್ತವೆ. ವಿಪರೀತವಾದ income flow ಮನುಷ್ಯನಲ್ಲಿ ಮಾನವೀಯತೆ ಕುಸಿಯುವಂತೆ ಮಾಡಿದೆ. ಇನ್ನು ಮಾರ್ಕ್ಸ್ ತನ್ನ ಸಿದ್ಧಾಂತಗಳಲ್ಲಿ ಬರಿ ಶ್ರಮಜೀವಿಗಳ ಪರ ಮಾತ್ರ ನಿಲ್ಲುತ್ತಾನೆ. ಆದರೆ, ಯಾವುದೇ ಸರಕು, ಸೇವೆಯ ಉತ್ಪಾದನೆಯಲ್ಲಿ ಬಂಡವಾಳಗಾರನ ಪಾತ್ರ ಹೆಚ್ಚಿನ ಪಾತ್ರ ವಹಿಸುತ್ತದೆ. ಬಂಡವಾಳ ಹೂಡಿಕೆ, ಉತ್ಪಾದನೆಯಾದ ಸರಕನ್ನು ಮಾರುಕಟ್ಟೆ ಮಾಡಿ ಮಾರಾಟ ಮಾಡುವುದು, ಕಚ್ಚಾ ವಸ್ತುಗಳನ್ನು ಕ್ರೋಢೀಕರಿಸುವುದು, ಉತ್ಪಾದನಾ ಸಮಯದಲ್ಲಿ ಆಗುವ ನಷ್ಟಗಳನ್ನು ಭರಿಸುವುದು ಮುಂತಾದುವುಗಳ ಜವಾಬ್ದಾರಿಯಿಂದಾಗಿ ಬಂಡವಾಳಗಾರ ಖಂಡಿತವಾಗಿಯೂ ಶ್ರಮಜೀವಿಗಿಂತಲೂ ಹೆಚ್ಚಿನ ಕ್ಷೋಭೆಗೊಳಗಾಗುವುದನ್ನು ವಾಸ್ತವವಾಗಿ ಅಲ್ಲಗಳೆಯುವಂತಿಲ್ಲ. ಹಾಗಾಗಿ ರಿಸ್ಕ್ ಶ್ರಮಜೀವಿಗಿಂತಲೂ ಬಂಡವಾಳಗಾರನ ಮೇಲೆಯೇ ಅಧಿಕವಾಗಿರುತ್ತದೆ. ಹಾಗಾಗಿ ಬಂಡವಾಳಗಾರರು ನಿರ್ದಯವಾಗಿಯೇ ವರ್ತಿಸುತ್ತಾರೆ. ಇಲ್ಲಿ ಮಾರ್ಕ್ಸ್ ಸಂಪೂರ್ಣವಾಗಿ ಅನಾವರಣಗೊಂಡು ಸತ್ವವನ್ನು ಕಳೆದುಕೊಳ್ಳುತ್ತಾನೆ. ನಾನು ಅರ್ಥ ಶಾಸ್ತ್ರದ ವಿದ್ಯಾರ್ಥಿಯಾಗಿರುವುದರಿಂದ ಇಷ್ಟೆಲ್ಲಾ ಸಂಗತಿಗಳು ನನ್ನ ಅರಿವಿಗೆ ಬರುತ್ತಿದೆಯೇನೋ ಅನ್ನಿಸುತ್ತಿದೆ.' ನಾನೂ ಮೂರ್ನಾಲ್ಕು ಸಿಪ್ ವಿಸ್ಕಿಯನ್ನು ಗುಟುಕರಿಸಿ ಮಾತನಾಡಿದ್ದೆ. ನಾನು ಇಂಥ ವಾತಾವರಣವನ್ನು ಅನುಭವಿಸಿ ಬಹಳ ದಿನಗಳಿದ್ದವು.

ಅಷ್ಟರಲ್ಲಿ ಜನಾರ್ದನ ಬಾಳಿಗ ಎರಡು ಪ್ಲೇಟುಗಳಲ್ಲಿ ಹಬೆಯಾಡುವ ಅಂಜಲ್ ಮತ್ತು ಕಾಣೆ ಮೀನಿನ ರವ ಮತ್ತು ತವಾ ಫ್ರೈಗಳನ್ನು ತಂದಿಟ್ಟಿದ್ದ. ಇಬ್ಬರೂ ಬಿಸಿ ಮೀನಿನ ಫ್ರೈ ಬಾಯಿಗಿಟ್ಟುಕೊಂಡಿದ್ದೆವು. ರುಚಿ ಅದ್ಭುತವಾಗಿತ್ತು. 'ನಾಚಿಕೆ ಏನೂ ಪಡಬೇಡಿ, ಮೀನನ್ನು